ಉಪಾಧ್ಯಕ್ಷೀಣಿಯವರು: ಪ್ರಸ್ತಾವ ಏನೆಂದರೆ " 1992ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್.ಬಂಗಾರಪ್ಪ(ಮುಖ್ಯಮಂತ್ರಿಯವರು):-ಮಾನ್ಯ ಉಪಾಧ್ಯಕ್ಷೀಣಿಯವರೆ, 1992ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷೀಣಿಯವರು :* ಅನುಬಂಧಗಳು ವಿಧೇಯಕವನ್ನು ಮಂಡಿಸಲಾಗಿದೆ

3. 1992ರ ಕರ್ನಾಟಕ ವೃತ್ತಿಗಳು, ಕಸುಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್.ಬಂಗಾರಪ್ಪ(ಮುಖ್ಯಮಂತ್ರಿಯವರು):-ಮಾನ್ಯ ಉಪಾಧ್ಯಕ್ಷೀಣಿಯವರೆ, 1992ರ ಕರ್ನಾಟಕ ವೃತ್ತಿಗಳು, ಕಸುಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ)ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷೀಣಿಯವರು: ಪ್ರಸ್ತಾವ ಏನೆಂದರೆ " 1992ರ ಕರ್ನಾಟಕ ವೃತ್ತಿಗಳು, ಕಸುಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್.ಬಂಗಾರಪ್ಪ(ಮುಖ್ಯಮಂತ್ರಿಯವರು):- ಮಾನ್ಯ ಉಪಾಧ್ಯಕ್ಷೀಣಿಯವರೆ, 1992ರ ಕರ್ನಾಟಕ ವೃತ್ತಿಗಳು , ಕಸುಬುಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ)ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷೀಣಿಯವರು: * ಅನುಬಂಧಗಳು ವಿಧೇಯಕವನ್ನು ಮಂಡಿಸಲಾಗಿದೆ

4. 1992ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್.ಬಂಗಾರಪ್ಪ(ಮುಖ್ಯಮಂತ್ರಿಯವರು):- ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾನ್ಯ ಸಾರಿಗೆ, ವಕ್ಫ್ ಮತ್ತು ಹಜ್ ಸಮಿತಿ ಮಂತ್ರಿಗಳ ಪರವಾಗಿ 1992ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷೀಣಿಯವರು: ಪ್ರಸ್ತಾವ ಏನೆಂದರೆ" 1992ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ)ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್.ಬಂಗಾರಪ್ಪ(ಮುಖ್ಯಮಂತ್ರಿಯವರು):-ಮಾನ್ಯ ಉಪಾಧ್ಯಕ್ಷೀಣಿಯವರೆ, 1992ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷೀಣಿಯವರು: * ಅನುಬಂಧಗಳು ವಿಧೇಯಕವನ್ನು ಮಂಡಿಸಲಾಗಿದೆ

1992ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ :2) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಎಸ್.ಬಂಗಾರಪ್ಪ(ಮುಖ್ಯಮಂತ್ರಿಯವರು):- ಮಾನ್ಯ ಉಪಾಧ್ಯಕ್ಷೀಣಿಯವರೆ, 1992ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2)ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಉಪಾಧ್ಯಕ್ಷೀಣಿಯವರು :-ಪ್ರಸ್ತಾವ ಏನೆಂದರೆ " 1992ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:

2) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3

ಉಪಾಧ್ಯಕ್ಷಿಣಿಯವರು: "ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 3ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:-

ಉಪಾಧ್ಯಕ್ಷಿಣಿಯವರು: ಪ್ರಸ್ತಾವ ಏನೆಂದರೆ, ಮೊದಲನೇ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ್ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವ ಅಂಗೀಕಾರ.

ಶ್ರೀ ಎಸ್.ಬಂಗಾರಪ್ಪ:(ಮುಖ್ಯಮಂತ್ರಿಯವರು):- ಮಾನ್ಯ ಉಪಾಧ್ಯಕ್ಷರೆ, 1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2)ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು.

ಪ್ರಕಟಣೆ.

ಉಪಾಧ್ಯಕ್ಷಿಣಿಯವರು: ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಹ ಬಂದಿರುತ್ತದೆ. " ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 116ರ ಮೇರೆಗೆ ವಿಧಾನಸಭೆಯಿಂದ ಅಂಗೀಕೃತವಾದ ಕರ್ನಾಟಕ ಜಿಲ್ಲಾಪರಿಷತ್ತುಗಳು ತಾಲ್ಲೂಕು, ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ(ತಿದ್ದುಪಡಿ)ವಿಧೇಯಕ 1992 ಅನ್ನು 27-3-1992ರಂದು ವಿಧಾನ ಪರಿಷತ್ತಿನಲ್ಲಿ ತಿರಸ್ಕರಿಸಲಾಯಿತೆಂದು ತಿಳಿಸುತ್ತೇನೆ."

ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕೃತವಾದ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಕೆಲವು ಭೂಮಿಗಳ ವರ್ಗಾವಣೆ ನಿಷೇಧ (ತಿದ್ದುಪಡಿ) ವಿಧೇಯಕ 1992ಅನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 26-3-1992 ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ."

ನಿಯಮ 334ರ ಮೇರೆಗೆ.

1. ವಿಷಯ: ವೀರಪ್ಪನ್ ತಂಡದವರ ಗುಂಡಿಗೆ ಬಲಿಯಾದ ಪೋಲೀಸರ ಕುಟುಂಬದವರಿಗೆ ನಿವೇಶನಗಳನ್ನು ಮಂಜೂರು ಮಾಡುವ ಬಗ್ಗೆ.

ಶ್ರೀ ಕೆ.ಹರ್ಷಕುಮಾರ ಗೌಡ:(ಚಾಮರಾಜ):- ಮಾನ್ಯ ಉಪಾಧ್ಯಕ್ಷರೆ, ಎರಡು ವರ್ಷಗಳ ಹಿಂದೆ ವೀರಪ್ಪನ್ ಮತ್ತಿತರರ ಗುಂಡಿಗೆ ಬಲಿಯಾದ ಮೈಸೂರು ಜಿಲ್ಲೆಯ ನಾಲ್ಕು ಜನ ಪೋಲೀಸ್ ಅಧಿಕಾರಿಗಳ ಕುಟುಂಬದವರಿಗೆ ನಾಲ್ಕು ನಿವೇಶನಗಳನ್ನು ಕೊಡುವುದಾಗಿ ಸರ್ಕಾರ ಘೋಷಣೆ ಮಾಡಿತ್ತು. ಈ ಬಗ್ಗೆ ಗೃಹ